## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**MVC** 676/2025 **PW**-1

ದಿಃ14.08.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 2 ನೇ ಎದುರುದಾರ ಪರ ವಕೀಲರಾದ ಶ್ರೀ ಎಂ ಜಿ ಪಿ ರವರಿಂದ**

ನನ್ನ ಖುದ್ದ ಊರು ನವಲಗುಂದ ತಾಲೂಕಿನಲ್ಲಿರುವ ಗುಡಿಸಾಗರ ಇರುತ್ತದೆ. ಅಪಘಾತ ಯಾವ ದಿನ ಆಯಿತು ಎಂದರೆ ಸಾಕ್ಷಿ ದಿಃ30-07-2025 ರಂದು ಎಂದು ನುಡಿಯುತ್ತಾರೆ. ನಾನು ಆ ದಿನ ಹುಬ್ಬಳ್ಳಿಯಿಂದ ನಮ್ಮ ಊರಿಗೆ ಹೊರಟಿದೇನು. ಸದರಿ ಅಪಘಾತ ಎಲ್ಲಿ ಆಯಿತು ಎಂದರೆ ಹುಬ್ಬಳ್ಳಿಯ ಹಳೆಯ ಕೋರ್ಟ ಸರ್ಕಲ್ ನಲ್ಲಿ ಎನ್ನುತ್ತಾರೆ. ಆ ದಿನ ನಾನು ಹುಬ್ಬಳ್ಳಿ ಕೋರ್ಟ ಸರ್ಕಲ್ ನ ಬಳಿ ಬಸ್ಸ ಹಿಡಿದಾಗ ತಕ್ಷಣ ಬಸ್ಸನ ಚಾಲಕ ಬಸ್ಸನ್ನು ಮುಂದೆ ಚಾಲನೆ ಮಾಡಿದ್ದಕ್ಕೆ ನಾನು ಕೆಳಗೆ ಬಿದ್ದೆ ಎಂದು ಹೇಳಿದ್ದು ಸುಳ್ಳು ಇದೆ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ಆ ದಿನ ಬಸ್ಸನ ಚಾಲಕ ಮುಂದೆ ಬಸ್ ನಿಲ್ದಾಣ ಇದ್ದ ಕಾರಣ ಅಲ್ಲಿ ಬಸ್ಸ ನಿಲ್ಲಿಸಬೇಕೆಂಬ ಕಾರಣಕ್ಕೆ ನಿಧಾನವಾಗಿ ಬಸ್ಸ ತಿರುಗಿಸಿಕೊಂಡು ಹೊರಟ್ಟಿದನು ಎಂದರೆ ಸಾಕ್ಷಿ ಇಲ್ಲ ನಿಧಾನವಾಗಿ ಹೋಗಿಲ್ಲ ಎನ್ನುತ್ತಾರೆ. ಆ ದಿನ ಬಸ್ಸನ ಬಾಗಿಲು ಮುಚ್ಚಿತ್ತು ಎಂದರೆ ಸಾಕ್ಷಿ ಬಾಗಿಲು ಮುಚ್ಚಿತ್ತು ಸಾಕ್ಷಿ ಮುಂದುವರೆದು ಬಾಗಿಲು ತೆರೆದಿತ್ತು ಎನ್ನುತ್ತಾರೆ. ಬಾಗಿಲು ತೆರೆದಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಹೋಗುತ್ತಿರುವ ಬಸ್ಸನ್ನು ಹತ್ತಲು ಹೋಗಿ ನನ್ನ ತಪ್ಪಿನಿಂದಲೆ ನಾನೇ ಬಿದ್ದು ಅಪಘಾತಪಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ತಪ್ಪಿನಿಂದಲೆ ಆಗಿದೆ ಎಂದರೆ ಸರಿಯಲ್ಲ. ನಾನು ಹತ್ತಬೇಕಾದಾಗ ಆತ ಬಸ್ಸ ಸ್ಪಿಡ ಮಾಡಿದಾ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಬಸ್ಸನ ಚಾಲಕನ ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ನನ್ನ ತಪ್ಪು ಇದ್ದರು ಕೂಡಾ ಬಸ್ಸ ಚಾಲಕನ ತಪ್ಪು ಇದೆ ಎಂದು ಸುಳ್ಳು

ಹೇಳುತ್ತಿದ್ದೇನೆಂದರೆ ಸರಿಯಲ್ಲ. ಬಸ್ಸ ಚಾಲಕನು ತನ್ನ ತಪ್ಪು ಇಲ್ಲದೆ ಇದ್ದರು ನಾನು ಕೆಳಗೆ ಬಿದ್ದ ನಂತರ ಬಂದು ಅಂಬುಲೈನ್ಸ ಕರೆಯಿಸಿ ಕಿಮ್ಸ ಆಸ್ಪತ್ರೆಗೆ ದಾಖಲಿಸಿದಾ ಎಂದರೆ ಸಾಕ್ಷಿ ಅವರು ಕಳುಹಿಸಿದ್ದು ನಿಜ ಎನ್ನುತ್ತಾರೆ. ಕಿಮ್ಸ ಆಸ್ಪತ್ರೆಗೆ ನನ್ನನ್ನು ಅಂಬುಲೈನ್ಸನಲ್ಲಿ ಚಾಲಕನೆ ಕಳುಹಿಸಿದ್ದು ಎಂದರೆ ಸಾಕ್ಷಿ ಅವರು ಅಲ್ಲ ಪೋಲೀಸರು ಕಳುಹಿಸಿದರು ಎನ್ನುತ್ತಾರೆ. ಕಿಮ್ಸ ಆಸ್ಪತ್ರೆ ಸರ್ಕಾರಿ ಆಸ್ಪತ್ರೆ ಎಂದರೆ ಸರಿ. ಸದರಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ನೀಡುತ್ತಾರೆ ಎಂದರೆ ಸಾಕ್ಷಿ ಕೆಲವೊಂದಿಷ್ಟು ಹೊರಗೆ ಬರೆದುಕೊಡುತ್ತಾರೆ ಎನ್ನುತ್ತಾರೆ. ಕೆಲವೊಂದಿಷ್ಟು ಹೊರಗೆ ಬರೆದುಕೊಡುತ್ತಾರೆ ಅವುಗಳನ್ನು ನಾವು ಹಣ ಖರ್ಚು ಮಾಡಿ ತಂದಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿ ಅದು ಸರಿಯಲ್ಲ ಎನ್ನುತ್ತಾರೆ. ವೈದ್ಯಕೀಯ ಖರ್ಚಾಗಾಗಿ 1 ಲಕ್ಷ್ಯ ರೂಪಾಯಿ ಖರ್ಚು ಮಾಡಿರುತ್ತೇವೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ಲಕ್ಷ್ಯ ರೂಪಾಯಿ ಖರ್ಚು ಮಾಡಿದ್ದೇನೆಂದು ತೋರಿಸಲು ನಾನು ಯಾವುದೇ ದಾಖಲೆ ನ್ಯಾಯಾಲಯಕ್ಕೆ ಕೊಟ್ಟಿಲ್ಲವೆಂದರೆ ಸಾಕ್ಷಿ ಕೊಟ್ಟಿದ್ದೇನೆ ಎನ್ನುತ್ತಾರೆ. ದಾಖಲೆ ಕೊಟ್ಟಿಲ್ಲದಿದ್ದರು ಕೊಟ್ಟಿದ್ದೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಸಂಪೂರ್ಣ ಗುಣಮುಖವಾದ ನಂತರ ಕಿಮ್ಸ ಆಸ್ಪತ್ರೆಯಿಂದ ಡಿಸಚಾರ್ಜ ಮಾಡಿರುತ್ತಾರೆ ಎಂದರೆ ಸರಿಯಲ್ಲ, ನಾನು ಇನ್ನು ಚಿಕಿತ್ಸೆ ಪಡೆಯುತ್ತಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಮತ್ತೆ ಕಿಮ್ಸ ಆಸ್ಪತ್ರೆಗೆ ಯಾವಾಗ ಹೋಗಿದ್ದೀರಿ ಎಂದರೆ ಸಾಕ್ಷಿ 4–5 ಬಾರಿ ಹೋಗಿದ್ದೇನೆ ಎನ್ನುತ್ತಾರೆ. ನಾನು ಇವತ್ತಿಗೂ ಸಹ ಚಿಕಿತ್ಸೆ ಪಡೆಯುತ್ತಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಹಾಗೂ ನಾನು ಸಂಪೂರ್ಣ ಗುಣಮುಖವಾಗಿದ್ದೇನೆಂದರೆ ಸರಿಯಲ್ಲ.

ನಾನು ಪೂರ್ಣ ಪ್ರಮಾಣದಲ್ಲಿ ಗುಣಮುಖವಾಗಿದ್ದರು ಸಹ ಇನ್ನು ಚಿಕಿತ್ಸೆ ಪಡೆಯುತ್ತಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ನಾನು ವಿವೇಕಾನಂದ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ಪಡೆಯುತ್ತಿದ್ದೇನೆಂದು ಸಾಕ್ಷಿ ನುಡಿಯುತ್ತಾರೆ. ವಿವೇಕಾನಂದ ಆಸ್ಪತ್ರೆಯಲ್ಲಿ ನಾನು ಹೆಚ್ಚಿನ ಚಿಕಿತ್ಸೆ ಪಡೆಯುತ್ತಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ ಮತ್ತು ನಾನು ಆ ಕುರಿತು ಯಾವುದೇ ದಾಖಲೆ ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ.

ಅಪಘಾತದ ಮುಂಚೆ ನಾನು ಗೌಂಡಿ ಹೆಲ್ಪರ್ ಎಂದು ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ

ಎನ್ನುತ್ತಾರೆ. ಸರ್ಕಾರದವರು ನೀಡಿರುವ ಲೇಬರ್ ಕಾರ್ಡ ನಿಮ್ಮ ಬಳಿ ಇದೇಯಾ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ಅದನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ಗೌಂಡಿ ಹೆಲ್ಪರ್ ಕೆಲಸ ಮಾಡುತ್ತಿದ್ದು ನನಗೆ 20 ಸಾವಿರ ರೂಪಾಯಿ ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಆದಾಯದಿಂದ ನನ್ನ ಕುಟುಂಬ ಜೀವನ ಮಾಡುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ ಹಾಗೂ ನನ್ನನ್ನು ನೋಡಿಕೊಳ್ಳಲು ಒಬ್ಬರು ಸಹಾಯಕರು ಬೇಕಾಗುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಕಿಮ್ಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ನಾನು ಸಂಪೂರ್ಣ ಗುಣಮುಖವಾಗಿದ್ದು ನನ್ನ ಕೆಲಸಗಳನ್ನು ನಾನು ಮಾಡಿಕೊಳ್ಳುತ್ತಾ ಇದ್ದೇನೆ ಆದರು ಹೆಚ್ಚಿನ ಪರಿಹಾರ ಬರಲಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಅಪಘಾತ ಕೆಎಸಆರಟಿಸಿ ಬಸ್ಸ ಚಾಲಕನ ತಪ್ಪಿನಿಂದ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ, ಸದರಿ ಅಪಘಾತ ನನ್ನ ತಪ್ಪಿನಿಂದಲೆ ಆಗಿದೆ ಎಂದರೆ ಸರಿಯಲ್ಲ. ಸದರಿ ಅಪಘಾತ ಬಸ್ಸ ಚಾಲಕನ ತಪ್ಪಿನಿಂದ ಆಗಿಲ್ಲವಾದ ಕಾರಣ ಕೆಎಸಆರಟಿಸಿರವರು ನನಗೆ ಯಾವುದೇ ಪರಿಹಾರ ಕೊಡಲು ಬಾಧ್ಯಸ್ಥರು ಅಲ್ಲವೆಂದರೆ ಸರಿಯಲ್ಲ.

ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಬಿಲ್ ಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ